ಅ) ಲಕ್ಕುಂಡಿ ಹಾಗೂ ಡಂಬಳ ಗ್ರಾಮಗಳಲ್ಲಿ ಬಸ್ ನಿಲ್ದಾಣ ಇಲ್ಲದ್ದರಿಂದ ಜನರಿಗೆ ಅತೀವ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದರೆ ಈ ಬಗ್ಗೆ ಸರ್ಕಾರ ಕೈಕೊಂಡ ಕ್ರಮಗಳೇನು ?

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು).—ಅ) ಬಂದಿದೆ.

ಆ) 1 ಲಕ್ಕುಂಡಿ ಗ್ರಾಮದಲ್ಲಿ ಬಸ್ ನಿಲ್ದಾಣ ಕಟ್ಟುವ ಕೆಲಸವನ್ನು 1983-84ನೇ ಸಾಲಿನ ಆಯ ವ್ಯಯ ಪಟ್ಟಿಯಲ್ಲಿ ಸೇರಿಸಲಾಗಿದೆ.

2) ಡಂಬಳದಲ್ಲಿ ಬಸ್ ನಿಲ್ದಾಣ ಕಟ್ಟುವ ಪ್ರಸ್ತಾವ ಸಧ್ಯಕ್ಕೆ ಇರುವುದಿಲ್ಲ

ಶ್ರೀ ಕೆ. ಹೆಚ್. ಕರುಡಗಿ.— ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಡಂಬಳ ಗ್ರಾಮದಲ್ಲಿ ಬಸ್ ನಿಲ್ದಾಣವನ್ನು ಕಟ್ಟುವ ಪ್ರಸ್ತಾಪ ಸಧ್ಯಕ್ಕೆ ಇಲ್ಲವೆಂದು ಹೇಳಿದ್ದೀರಿ. ಇದಕ್ಕೆ ಕಾರಣ ಕೊಡುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್.—ಯಾವುದೇ ಒಂದು ಊರಿನಲ್ಲಿ ಬಸ್ ನಿಲ್ದಾಣವನ್ನು ಕಟ್ಟಿಸುವಾಗ ಪ್ರಾಶಸ್ತ್ಯಗಳನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ. ನಿಗಮದಲ್ಲಿರುವ ಹಣಕಾಸು ಬರೀ ದೊಡ್ಡ ಊರುಗಳಿಗೆ ಸೌಲಭ್ಯ ಕಲ್ಪಿಸಿಕೊಡತಕ್ಕದ್ದಕ್ಕೆ ಮೀಸಲಾಗಿರುವುದರಿಂದ ಅದ್ಯತೆ ಮೇರೆಗೆ ಈ ವರ್ಷದ ಆಯವ್ಯಯದಲ್ಲಿ ಅದನ್ನು ಸೇರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಲಕ್ಕುಂಡಿ ಗ್ರಾಮವನ್ನು 1983-84 ನೇ ಸಾಲಿನ ಬಜೆಟ್ಟಿನಲ್ಲಿ ಸೇರಿಸಿದೆ ೀವೆ.

ಕೊಡಚಾದ್ರಿ ಬೆಟ್ಟವನ್ನು ಪ್ರವಾಸಿ ಕೇಂದ್ರವನ್ನಾಗಿ ಮಾಡುವ ಬಗ್ಗೆ

137 ಶ್ರೀ ಎಲ್. ತಿಮ್ಮಪ್ಪ ಹೆಗಡೆ (ಸಾಗರ).—ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ) ಕೊಡಚಾದ್ರಿ ಬೆಟ್ಟಗಳು ಅತ್ಯಂತ ರಮಣೀಯ ಪ್ರವಾಸಿ ಕೇಂದ್ರ ಆಗಬಲ್ಲದೆಂಬುದನ್ನು ಸರ್ಕಾರದವರಿಗೆ ಗೊತ್ತಿದೆಯೇ ;

ಆ) ಈ ಕೇಂದ್ರದ ಅಭಿವೃದ್ಧಿಗೆ ಈ ವರೆಗೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ರಘುಪತಿ (ಮಾನ್ಯ ವಾರ್ತಾ ಮತ್ತು ಪ್ರವಾಸೋದ್ಯಮ ಮಂತ್ರಿಗಳು).—ಅ)ಗೊತ್ತಿದೆ.

ಆ) ಸಧ್ಯಕ್ಕೆ ಯಾವ ಯೋಜನೆಯನ್ನೂ ಕೈಗೊಂಡಿಲ್ಲ. ಬೆಟ್ಟಕ್ಕೆ ಹೋಗಲು ಜೀಪ್ ರಸ್ತೆ ಮಾತ್ರವಿದೆ. ಮತ್ತು ಒಂದು ಮಳೆಯಿಂದ ತಡೆ ಕೊಡುವ ಶಾಖೆ ಇದೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗಡೆ.—ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಗೊತ್ತಿದೆ ಎಂದು ಹೇಳಿದ್ದಾರೆ. ಅಂದಮೇಲೆ ಅದನ್ನು ಹೇಗೆ ಅಭಿವೃದ್ಧಿ ಮಾಡುತ್ತಾರೆಂಬ ಬಗ್ಗೆ ಒಂದು ಸ್ಪಷ್ಟವಾದ ಯೋಜನೆಯನ್ನು ಮಂತ್ರಿಗಳು ಹೇಳಲಿ ಎಂದು ಕೇಳುತ್ತೇನೆ ?

ಶ್ರೀ ಎಂ. ರಘುಪತಿ.—ಗೊತ್ತಿದೆ ಆಂದರೆ, ಅದು ಒಂದು ಸುಂದರವಾದ ಸ್ಥಳ ಮತ್ತು ಕೊಲ್ಲೂರಿನ ಕ್ಷೇತ್ರಕ್ಕೆ ಬಹಳ ಸಮೀಪವಾದ ಸ್ಥಳ ಎಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ಕೇಂದ್ರ ಸರ್ಕಾರದವರು ಕೂಡ ಆ ಪ್ರದೇಶವನ್ನು ಅಭಿವೃದ್ಧಿ ಪಡಿಸಬೇಕೆಂದು ಮಾಡಿದ್ದಾರೆ. ಆ ಸ್ಥಳವನ್ನು ಟೂರಿಸ್ಟ್ ಸರ್ಕ್ಯೂಟಿನಲ್ಲಿ ಸೇರಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಬರೆದು ಪರ್ಮಿಷನ್ ತೆಗೆದುಕೊಳ್ಳುವುದಕ್ಕೆ ಏರ್ಪಾಡು ಮಾಡುತ್ತೇವೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗೆಡೆ.—ಹಿಂದೆ ಕೂಡ ಒಂದು ಯೋಜನೆ ತಯಾರಾಗಿತ್ತು. ಆದ್ದರಿಂದ ಆದು ಈಗ ಯಾವ ಸ್ಥಿತಿಯಲ್ಲಿದೆ ಎಂದು ಕೇಳುತ್ತೇನೆ. ಅದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತರದೆ ಹೋಗಿದ್ದರೆ ಈಗಲಾದರೂ ತರಬೇಕು ಮತ್ತು ರಾಜ್ಯ ಸರ್ಕಾರದ ಮಟ್ಟದಲ್ಲಿ ಏನೇನು ಕೆಲಸಗಳನ್ನು ಮಾಡಬೇಕೋ ಅದನ್ನು ಮಾಡಬೇಕು. ಅಲ್ಲಿರತಕ್ಕ ರಸ್ತೆಯಲ್ಲಿ ಇವತ್ತಿನ ದಿನಸ ಜೀಪು ಕೂಡ ಹೋಗುವ ಸ್ಥಿತಿ ಇಲ್ಲ. ಆದ್ದರಿಂದ, ಈ ವರ್ಷದಲ್ಲಿ ಏನು ಕೆಲಸ ಮಾಡುತ್ತೀರಿ ?

ಶ್ರೀ ಎಂ. ರಘುಪತಿ.—ನಾನು ಸಂಬಂಧಪಟ್ಟ ಅಧಿಕಾರಿಗಳನ್ನು ಕಳುಹಿಸಿ ನೀವು ಹೇಳಿದಂತೆ ರಸ್ತೆ ದುರ್ವ್ಯವಸ್ಥೆ ಬಗ್ಗೆ ನೋಡಿಸುತ್ತೇನೆ ಹಾ॥ ಆಚಾರ್ಯ ಅವರು ಮತ್ತು ಇನ್ನೊಬ್ಬರು ಆ ಭಾಗಕ್ಕೆ ಕರೆದಾಗ ನಾನು ಬರುತ್ತೇನೆ. ಆಗ ಎಲ್ಲ ಪರಿಶೀಲನೆ ಮಾಡಿ ನೋಡಿ ಸೂಕ್ತ ಕ್ರಮ ತೆಗೆದುಕೊಳ್ಳೋಣ.

ಒಬ್ಬ ಮಾನ್ಯ ಸದಸ್ಯರು.—ಈಗಿರತಕ್ಕ ಸೌಲಭ್ಯ ಕೆಟ್ಟುಹೋಗಿರುವುದರಿಂದ ಶೀಘ್ರವಾಗಿ ಸೂಕ್ತ ಕ್ರಮ ತೆಗೆದುಕೊಳ್ಳುವ ವ್ಯವಸ್ಥೆ ಮಾಡಬೇಕು. ಕೊಲ್ಲೂರಿನಿಂದ ಕೊಡಚಾದ್ರಿ 7 ಮೈಲಿ ದೂರದಲ್ಲಿದೆ. ಆದ್ದರಿಂದ ಪ್ರತ್ಯಕ್ಷವಾಗಿ ಭೇಟಿಯಾಗಿ ವ್ಯವಸ್ಥೆ ಮಾಡಬೇಕು.

ಶ್ರೀ ಎಂ. ರಘುಪತಿ.—ಪ್ರತ್ಯಕ್ಷವಾಗಿ ನಾನು ಭೇಟಿಯಾಗುತ್ತೇನೆ. ನಿಮ್ಮನ್ನೂ ಕರೆದುಕೊಂಡು ಹೋಗಿ ನೋಡಿ ಸರಿಮಾಡೋಣ.

ಶ್ರೀ ಕೆ. ಪಿ. ಶಾಂತಮೂರ್ತಿ.—ಕೊಡಚಾದ್ರಿ ಬೆಟ್ಟದ ಪ್ರವಾಸಿ ಕೇಂದ್ರದಂತೆ ನಮ್ಮ ರಾಜ್ಯದಲ್ಲಿ

ಇನ್ನೂ ಅನೇಕ ಸ್ಥಳಗಳಿವೆ. ಬೆಳಗಿರಿರಂಗನ ಬೆಟ್ಟ ಪ್ರಮುಖವಾದ ಪ್ರವಾಸಿ ಕೇಂದ್ರ. ಅದನ್ನೂ ಕೂಡ ಅಭಿವೃದ್ಧಿ ಪಡಿಸುವುದಕ್ಕೆ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಎಂ. ರಘುಪತಿ.— ಕ್ರಮ ಕೈಗೊಳ್ಳುತ್ತೇನೆ.

ಪ್ರಜಾಪ್ರತಿನಿಧಿ ಸಭೆಯ ಸದಸ್ಯರುಗಳಿಗೆ ವಿಶ್ರಾಂತಿ ವೇತನ ನೀಡುವ ಕುರಿತು

138 ಶ್ರೀ ಜಿ. ಬಸಪ್ಪ (ಹೊಸದುರ್ಗ).— ಮಾನ್ಯ ಕಾನೂನು ಮತ್ತು ಸಂಸದೀಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ಹಿಂದಿನ ಪ್ರಜಾಪ್ರತಿನಿಧಿ ಸಭೆಯ ಸದಸ್ಯರುಗಳ ಸಂಖ್ಯೆ ಎಷ್ಟು ;

ಆ) ಇವರುಗಳಿಗೂ ಮಾಜಿ ವಿಧಾನ ಮಂಡಲದ ಸದಸ್ಯರಿಗೆ ಪಾವತಿ ಮಾಡುತ್ತಿರುವ ರೀತ್ಯಾ ನಿವೃತ್ತಿ ವೇತನ ನೀಡುವ ವಿಷಯವನ್ನು ಸರ್ಕಾರದವರು ಯೋಚಿಸುವರೆ ?

ಶ್ರೀ ಎ. ಲಕ್ಷ್ಮಿಸಾಗರ್ (ಮಾನ್ಯ ಕಾನೂನು ಮತ್ತು ಸಂಸದೀಯ ಮಂತ್ರಿಗಳು.—ಆ) 155

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎ. ಲಕ್ಷ್ಮೀಸಾಗರ್.—ಹಿಂದಿನ ಪ್ರಜಾಪ್ರತಿನಿಧಿ ಸಭೆಯ ಸದಸ್ಯರುಗಳಿಗೆ ಕೂಡ ವಿಶ್ರಾಂತಿ ವೇತನ ಕೊಡಬೇಕೆಂದು ಅನೇಕ ಮನವಿಗಳನ್ನು ಆಗಿಂದಾಗ್ಗೆ ಸಲ್ಲಿಸುತ್ತಾ ಬಂದಿದ್ದಾರೆ. ಆ ಮನವಿಗಳನ್ನು ಪರಿಶೀಲನೆ ಮಾಡುವುದಕ್ಕೋಸ್ಕರ 3-3-81 ರಲ್ಲಿ ಹಿಂದಿನ ಸರ್ಕಾರ ಮುಖ್ಯಕಾರ್ಯದರ್ಶಿಯವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚಿಸಿತ್ತು. ಆ ಸಮಿತಿಯವರು ಎಲ್ಲ ಮನವಿಗಳನ್ನು ಪರಿಶೀಲನೆ ಮಾಡಿ ಪ್ರಜಾಪ್ರತಿನಿಧಿ ಸಭೆ ಸದಸ್ಯರುಗಳಿಗೆ ವಿಶ್ರಾಂತಿ ವೇತನ ಕೊಡುವುದಕ್ಕಾಗುವುದಿಲ್ಲವೆಂದು ತಮ್ಮ ವರದಿಯಲ್ಲಿ ತಿಳಿಸಿದ್ದಾರೆ. ಅನಂತರವೂ ಮನವಿಗಳು ಬರುತ್ತಿವೆ. ಅವುಗಳನ್ನು ಮತ್ತೆ ಪರಿಶೀಲನೆ ಮಾಡುತ್ತೇನೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಸ್.ಜಿ. ರಾಮಲಿಂಗಯ್ಯ.—ಶಾಸನಸಭಾ ಸದಸ್ಯರಿಗೆ ವೇತನ ಕೊಟ್ಟು ನಂತರ ವಿಶ್ರಾಂತಿ ವೇತನ ಏನ್ನೂ ಕೊಡುತ್ತೀರಿ. ಆದರೆ ವೇತನ ಇಲ್ಲದೆ ಕೆಲಸ ಮಾಡುವವರಿಗೆ ವಿಶ್ರಾಂತಿ ವೇತನ ಕೊಡುವುದು ನ್ಯಾಯವಲ್ಲವೆ ?

ಉಪಾಧ್ಯಕ್ಷರು.—ಅದಕ್ಕೆ ಉತ್ತರ ಹೇಳಿದ್ದಾರೆ.

ಶ್ರೀ ಎಸ್. ಜಿ. ರಾಮುಲಿಂಗಯ್ಯ.—ಉತ್ತರ ಸರಿಯಾಗಿ ಬರಲಿಲ್ಲ.

ಉಪಾಧ್ಯಕ್ಷರು.— ಉತ್ತರ ಹೇಳಿದ್ದಾರೆ ದಯವಿಟ್ಟು ಕುಳಿತುಕೊಳ್ಳಿ, ಬೇರೆ ಪ್ರಶ್ನೆ ಕರೆಯಬೇಕು.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಸೂಕ್ತವಾದ ಉತ್ತರ ಹೇಳಲಿಲ್ಲ. ದಯವಿಟ್ಟು ಕೇಳುವುದಕ್ಕೆ ಅವಕಾಶ ಕೊಡಿ. ಕೇಳಬೇಕಾದ್ದು ಇನ್ನೂ ಕೆಲವು ಪ್ರಶ್ನೆಗಳಿವೆ.

ಉಪಾಧ್ಯಕ್ಷರು.—ಬೇರೆ ಪ್ರಶ್ನೆ ಕರೆಯುತ್ತಿದ್ದೇನೆ. ದಯವಿಟ್ಟು ಕೂರಿ. ಈಗ ಶ್ರೀ ರಾಮುದೇವ್ ಅವರು 139ನೇ ಪ್ರಶ್ನೆಯನ್ನು ಕೇಳಬಹುದು.

ದ್ವಿಚಕ್ರ ವಾಹನ ಚಾಲಕರು ಶಿರಸ್ತ್ರಾಣ ಧರಿಸುವ ಬಗ್ಗೆ

139. ಶ್ರೀ ಪಿ. ರಾಮುದೇವ್ (ಮಲ್ಲೇಶ್ವರ).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ಕರ್ನಾಟಕದಲ್ಲಿರುವ ದ್ವಿಚಕ್ರ ವಾಹನಗಳ ಸಂಖ್ಯೆ ಎಷ್ಟು ;

ಆ) ಈ ವಾಹನ ಚಾಲಕರು ಕಡ್ಡಾಯವಾಗಿ ಶಿರಸ್ತ್ರಾಣ ಧರಿಸುವುದನ್ನು ಸಡಲಿಸಬೇಕೆಂಬ ಮನವಿಗಳು ಸರ್ಕಾರಕ್ಕೆ ಬಂದಿವೆಯೇ ;

ಇ) ಹಾಗಿದ್ದಲ್ಲಿ ಈ ಕಡ್ಡಾಯ ಶಿರಸ್ತ್ರಾಣವನ್ನು ಸಡಿಲಿಸಲು ಸರ್ಕಾರ ಉದ್ದೇಶಿಸುವುದೇ ?

ಶ್ರೀ ಎಂ.ಪಿ. ಪ್ರಕಾಶ್ (ಸಾರಿಗೆ ರಾಜ್ಯ ಮಂತ್ರಿಗಳು).— (ಅ)31-1-1983 ಅಂದಿಗೆ 2,89,893

ಆ) ಹೌದು

ಇ) ಇಲ್ಲ.

ಶ್ರೀ ಪಿ. ರಾಮುದೇವ್.—ಎರಡು ಲಕ್ಷ ದ್ವಿಚಕ್ರ ವಾಹನಗಳು ಶಿರಸ್ತ್ರಾಣವನ್ನು ಧರಿಸುತ್ತಿದ್ದು ಶಿರಸ್ತ್ರಾಣ ಧರಿಸುವುದನ್ನು ಸಡಿಲಿಸಬೇಕೆಂದು ಇವರು ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿದ್ದಾರೆಂದು ಕೇಳಿದ್ದೇನೆ. ನನಗೆ ಸರ್ಕಾರದ ಬಗ್ಗೆ ಬಹಳ ಗೌರವವಿದೆ. ಏಕೆಂದರೆ ಅನೇಕ ನಮ್ಮ ತಲೆಗಳನ್ನು ಉಳಿಸುವ ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಈ ಶಿರಸ್ತ್ರಾಣ ಧರಿಸುವುದನ್ನು ಆಪ್ಷನಲ್ ಮಾಡದೇ ಇರುವುದಕ್ಕೆ ಕಾರಣವೇನು ?